ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 11-11-2024

ಮುಖ್ಯ ವಿಚಾರಣೆಃ ಶ್ರೀ. ಕೆ.ಪಿ.ಪಿ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರ ಸಲ್ಲಿಸುತ್ತಿದ್ದು ಅದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿರುತ್ತದೆ. ಆದನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿದ್ದು ಅದನ್ನು ಓದಿ ನೋಡಿ ಸಹಿ ಮಾಡಿರುತ್ತೇನೆ. 1991-92, 2018-19 ರ ಭೂ ಮಂಜೂರಾತಿಯ ಕಡತದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ಉಪ ವಿಭಾಗಾಧಿಕಾರಿಗಳ ನ್ಯಾಯಾಲಯ ಎನ್.ಸಿ.ಆರ್.150/2014-15 ರ ಆದೇಶದ ಪ್ರತಿಯನ್ನು ನಿಪಿ 2 ಎಂದು, ಜಿಲ್ಲಾಧಿಕಾರಿಗಳ ನ್ಯಾಯಾಲಯ ದಿಃ28-07-2023 ರಂದು ಆಗಿರುವ ಆದೇಶದ ಪ್ರತಿಯನ್ನು ನಿಪಿ 3 ಎಂದು, ಪ್ರತಿವಾದಿಯ ಆಸ್ತಿಗೆ ಸಂಬಂಧಿಸಿದಂತೆ ಸಾಗುವಳಿ ಚೀಟಿಯ ದೃಡೀಕೃತ ನಕಲನ್ನು ನಿಪಿ 4 ಎಂದು, ಸರ್ವೆ ನಂ.13/3 ರ ಪಹಣಿಯ ದೃಡೀಕೃತ ನಕಲನ್ನು ನಿಪಿ 5 ಎಂದು, ಸರ್ವೆ ನಂ.13/22 ರ ಪಹಣಿಯನ್ನು ನಿಪಿ 6 ಎಂದು, ಸರ್ವೆ ನಂ.13/3 ರ ಮತ್ತೊಂದು ಪಹಣಿಯನ್ನು ನಿಪಿ 7 ಎಂದು, ಪೊಲೀಸರು ನೀಡಿರುವ ಹಿಂಬರಹವನ್ನು ನಿಪಿ 8 ಎಂದು, ಪೊಲೀಸರಿಗೆ ನೀಡಿರುವ ದೂರನ್ನು ನಿಪಿ 9 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.

(ನನ್ನ ಉಕ್ತಲೇಕನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಸಹಿ/-

ಓದಿ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ., ಸೋಮವಾರಪೇಟೆ.